ಒಂತರ ಸೇತ್ವೆಯಂಗಿತ್ತು. ಎಲ್ಲು ಕಡೆಗೂ ಜಗ್ಳ ಮುನ್ಸು ಕಡ್ಮೆಯಾಗ್ಲಿ ಅಂತ ಈ ನಡ್ಲು ಮನೇನೆ ಎಲ್ಡು ಕಡೀಕು ಅಲ್ಲು ಕಿಸ್ಕಂಡು ಮಾತಾಡ್ಸದು. ಈಗ್ಯಾಕ ನಡ್ಲು ಮನೆ ಗರಂ ಆಗೀತೆ, ಏನು ಮಾತಾಂಡಗಿಲ್ಲ, ನಗಂಗಿಲ್ಲ, ನಂಗೂ ಗೊತ್ತಾಗ್ದಂಗೆ ಅದೇನಾತೋ ಏನೋ. ನಾನ್ಬೇರೆ ನಿಮ್ಗೆ ಕತೆ ಏಳ್ಕಂಡು, ಇಲ್ಲಿ ಸ್ಕೂಲು-ಗೀಲು ಅಂತಾವ್ರಲ್ಲ ಆ ಮಕ್ಳು ನಂತಾವ ಬಂದು ನನ್ನ ನೆಳ್ಳಲ್ಲೇ ತಿಂತಾವೆ, ನನ್ನ ಕೈ ಕಾಲಿಗೆ ಜೋತು ಬಿದ್ದು ಜೋಕಾಲಿ ಆಡ್ತಾವೆ, ಅವ್ರ ಮಾತು, ನಗು, ಜಗ್ಳ, ಮುನ್ಸು ಎಲ್ಲಾನು ದಿನಾ ನೋಡ್ಕೋಬೇದು ಅಂತ ಕನ್ಸು ಕಾಣ್ಕಂಡು ಬಿದ್ದಿದ್ದೆ. ಮೊನ್ನೆ ಬೇರೆ ಯಾರೋ ಪೂಜೆಗೆ ಅಂತ ಬಂದು ಒಂದೊಂದು ಕಟ್ಟು ಊದ್ಬತ್ತಿ ಅಚ್ಚಿ, ಒಗೆ ಎಬ್ಸಿ ಓದ್ರು. ಅವಾಗಿಂದ ನಂಗೂ ಒಂತರಾ ಮಂಕು ಕವ್ದಂಗೆ ಆಗೀತೆ. ಆ ಒಗೇಗೆ ಎದ್ದು ಆರೋದ ಎಲ್ಡು ಅಕ್ಕಿ ಮರೀಗೂಳೂ ತಿರ್ಗಿ ಬಂದಿಲ್ಲ. ಅದೇನಿತ್ತೋ ಆ ಒಗೇಲಿ ಕೆಂಪಾಗಿದ್ದ ಅಣ್ಣುಗ್ಗೂಳೆಲ್ಲಾ ಕಪ್ಪಾಗಕೆ ಅತ್ಯಾವೆ. ಆಕಾಶ್ದಲ್ಲಿ ಆರೋ ಅಕ್ಕಿಗಳ್ಗೆ ನಾನೇ ಕೈಚಾಚಿ ಅಣ್ಣು ಕೊಡ್ತೀನಿ ಬರ್ರೋ ಅಂದ್ರೆ ಅವು ಪುರ್ರೋ ಅಂತ ಆರ್ತಾವೆ. ಇವಾಗ ವಸಿ ಮಂಕು ತಿಳಿಯಾದಂಗೆ ಅನುಸ್ತೀತೆ.

ಓ ಅಲ್ನೋಡಿ ನಡ್ಲು ಮನೇವು ಆ ಕಡೆ-ಈ ಕಡೆ ಮನೇವ್ನ ಕರ್ಕಂಡು ನನ್ತಾವೇನೇ ಬತಾವೆ. ಯಾರೋ ಸೂಟು ಬೂಟು ಆಕಿರರು ಮೂರ್ನಾಕು ಒಸ ಜನ ಬೇರೆ ಇದಾವೆ. ನಾನು ಆ ಕಾಲ್ದಿಂದ ಈ ಕಾಲುದ್ವರ್ಗೂ ಎಂತೆಂತದೆಲ್ಲಾ ನೋಡಿನೋ. ಓ ಅಂಗಾರೆ ಆ ಜಾಗ್ದಲ್ಲಿ ಸ್ಕೂಲು ಮಾಡ್ಸಕೆ ಮಾತಾಡ್ತಾವೆ ಅನ್ಸುತ್ತೆ. ಸದ್ಯ ನನ್ಜೊತೆ ಆಡಕೆ ಮಕ್ಳು ಮರಿ ಬಂದಾವು. ಅಷ್ಟಾರ ಕನ್ಸು ಕೈಗೆ ಬಂದ್ಬಿಡ್ಲಿ. ಇನ್ನ ಅವ್ರೋಗತನ್ಕ ನಾನು ಮಾತಾಡಲ್ಲ. ಈಗ ಅವ್ರೆ ಎಲ್ಲಾ ಮಾತಾಡ್ತಾರಲ್ಲ, ಮುಂದಿನ ಕತೇನ ಅಂಗೇ ಕೇಳುಸ್ಕಂಡ್ಬಿಡಿ.

ಬಲ್ಗಡೆ ಮನೆ: ಬನ್ನಿ ಬನ್ನಿ, ಈ ತಾವ ಬನ್ನಿ, ಇದೇ ಜಾಗ ನೋಡ್ರಿ.

ಎಡ್ಗಡೆ ಮನೆ: ಸರಿಯಾಗಿ ನೋಡ್ಕಳಿ. ಆಮೇಲೆ ಬೇರೆ ಬೇರೆ ತಾವೆಲ್ಲ ಓಗೀರಾ. ಚನಾಗಿ ಸಮ ಮಾಡ್ಕಂಡು ಸ್ಕೂಲು ಕಟ್ಬಿಡಿ.

ಹೊಸ ಜನ: ಏನ್ರೀ ನಡ್ಲು ಮನೇವ್ರೆ, ನೀವೇನು ಮಾತಾಡ್ತಿಲ್ಲ, ನಿಮ್ಗೆ ಒಪ್ಗೆ ಇದೆ ತಾನೆ? ನಿಮ್ಮೊಪ್ಗೆ ಇಲ್ದೆ ನಾವೇನು ಮಾಡಂಗಿಲ್ಲ, ಮುಂದುವರಿಯಂಗಿಲ್ಲ. ಅವತ್ತೊಂದು ಜಾಗ ತೋರ್ಸಿ ಇವತ್ತೊಂದು ಜಾಗ ಏಳ್ತಿದೀರ. ಏನಾಯ್ತು ಎಲ್ಲಾ ಡಿಟೈಲಾಗಿ ಏಳಿ, ಒಂದು ಒಪ್ಗೆ ಪತ್ರ ಕೊಟ್ಬಿಡಿ.

ನಡ್ಲು ಮನೆ: ಏನ... ಅವ್ರಿಗೆಲ್ಲಾ ಎಂಗಾಗುತ್ತೋ ಅಂಗೆ ಮಾಡಿ. ಒಟ್ನಲ್ಲಿ ಎಲ್ಡು ಕಡೆ ಜಗ್ಳ ನಿಲ್ಬೇಕು ಅಷ್ಟೆಯಾ. ನಂಗೂ ಸುಮಾರ್ ವರ್ಷದಿಂದ ಇದುನ್ನೆಲ್ಲಾ ನೋಡಿ ನೋಡಿ ಸಾಕಾಗೀತೆ, ನಾನು ಎಷ್ಟೂಂತ ಮಾಡಾನ.

ಬಲ್ಗಡೆ ಮನೆ: ಏನು ಏನು ಮಾಡಿ ದಬಾಕಿರದು ನೀನು? ನಾವು ಜಗಳ ಆಡ್ದಾಗ ಒಳ್ಗಡೆಯಿಂದ ಬೀಗ ಆಕ್ಕಂಡು ಕೂತ್ಕತಿದ್ದೆ, ಪಂಚಾತ್ಗೀಗೆ ಅಂತ ಬಂದ್ರೆ ಅಡ್ಗೋಡೆ ಮೇಲೆ ದೀಪ ಇಟ್ಟಂಗೆ ನ್ಯಾಯ ಏಳ್ತಿದ್ದೆ, ಅಷ್ಟೆಯಾ.

ಎಡ್ಗಡೆ ಮನೆ: ಊಂ ಅಷ್ಟೆಯ. ಆಮೇಲೆ ಎಲ್ಡು ಮನೆ ಕಡಿಕೆ ಚನಾಗಿದ್ದು, ಎಲ್ಡು ಕಡೀದ ಬಾಚ್ಕಂಡು ತಿಂತಿದ್ದೆ. ಅದ್ಕೆ ನಿನ್ನ ಮನೆ ಅಂಗೆ ಉದ್ದುಕ್ಕೆ ಬೆಳ್ಕಂಡಿರದು.



ನಡ್ಲು ಮನೆ: ಅಡ್ಗೋಡೆ ಮೇಲೆ ದೀಪ ಇಟ್ರೆ ಅಲ್ವ ಎಲ್ಡು ಕಡೀಕು ಬೆಳ್ಕು ಬರದು. ಒಂದ್ಕಡೆ ಪೂರ್ತಿ ಬೆಳ್ಕು, ಇನ್ನೊಂದ್ಕಡೆ ಪೂರ್ತಿ ಕತ್ಲು ಇರಾಕಿಂತ, ಎಲ್ಡು ಕಡೀಕು ಚೂರ್ಚೂರು ಬೆಳ್ಕು ಕೊಡ್ಬೋದಲ್ವ?

ಎಲ್ಡು ಮನೆ: ಊಂ! ನೀನು ಚೂರ್ಚೂರು ಬೆಳ್ಕು ಕೊಟ್ಟಿದ್ಕೆಯ ನಮ್ ಬುದ್ದೀನು ಇಂಗೆ ಮಂಕಾಗಿರದು, ಈಗ ವಿಷ್ಯಕ್ಕೆ ಬಾ.

ನಡ್ಲು ಮನೆ: ನಾನು ಚೂರ್ಚೂರು ಬೆಳ್ಕಾದ್ರು ಕೊಟ್ಟೆ ಅಂತ ಒಪ್ಕಂತೀರಲ್ಲ ಬಿಡಿ. ಎಲ್ಡು ಕಡೇನು ಬಾಚ್ಕಂಡೀನಿ ಅಂತೀರಲ್ಲ, ನೀವಿಬ್ರು ಜಗ್ಳ ಆಡ್ವಾಗ ನಂಗೆ ಏನಾಗದು ಅಂತ ಎಂದಾರ ಯೋಚ್ಸೀರ? ನೀನು ಎಡ್ಗಡೆಯಿಂದ ಬೈತಿದ್ದೆ, ನೀನು ಬಲ್ಗಡೆಯಿಂದ. ನಮ್ಮನೆ ಮಕ್ಳು ಎಲ್ಡು ಕಡೆ ಬೈಗುಳಾನು ಚನಾಗಿ ಕಲ್ತ್ಕಂಡು ಬಿಟ್ಟಾವೆ. ಅಮೇಲೆ ಆ ಕಡೆಯಿಂದ ಉಗುದ್ರು, ಈ ಕಡೆಯಿಂದ ಉಗುದ್ರೂ ನಮ್ಮನೆ ಮೇಲೆ ಉಗ್ಳು ಬಂದು ಬೀಳ್ತಿದ್ದಿದ್ದು. ಅವತ್ತು ನೀವು ಎಲ್ಡೂ ಕಡೇರು ಕಲ್ಲು ಬೀಸ್ಕಂಡು ಒಡ್ದಾಡ್ತಿದ್ರೆ ಒಡ್ದೋಗಿದ್ದು ನಮ್ಮನೆ ಕಿಟ್ಕಿ ಗಾಜು. ನಮ್ಮನೆ ಉದ್ದುದ್ದ ಬೆಳ್ಕಂಡು ಓಗ್ತಿರದೇ ನಿಮ್ಮನೆ ಮಕ್ಳು ಮೇಲ್ಗಡೆ ಸಂಸಾರ ಮಾಡ್ತಿರದ್ಕೆ, ಕದ್ದು-